ಬರೆದ ಅವನ ಕೆಲವು ಉತ್ತರಾಧಿಕಾರಿಗಳು ಏಕತಾನತೆ ತುಂಬಿದ ಕಾವ್ಯಗಳನ್ನು ಬರೆದರು. ಕಥನ, ವರ್ಣನೆ, ಭಾವನೆಗಳ ಸಂವಹನ, ಸಂಭಾಷಣೆ ಮುಂತಾದ ಸಂಗತಿಗಳ ವಿಶಿಷ್ಟ ಲಕ್ಷಣಗಳನ್ನು ಕಂಡುಕೊಂಡು ಅದಕ್ಕೆ ಅನುಗುಣವಾಗಿ ಪದ್ಯಗಳ ಶಿಲ್ಪದಲ್ಲಿಯೂ ಬದಲಾವಣೆಗಳನ್ನು ತಂದುಕೊಳ್ಳಲು ಅವನಿಗೆ ಸಾಧ್ಯವಾಯಿತು. ಕವಿತೆಯ ಆಶಯ ಮತ್ತು ಅನುಭವಲೋಕಗಳಲ್ಲಿ ಸಾಕಷ್ಟು ಬದಲಾವಣೆಯಾದರೂ ನಮ್ಮ ಶೈಲಿಯಿಂದ ಬಿಡುಗಡೆ ಪಡೆಯದೆ ಸೊರಗುತ್ತಿರುವ ಅಥವಾ ತಲೆಗೆಲ್ಲ ಒಂದೇ ಮಂತ್ರವೆನ್ನುವ ಹಾಗೆ ಬರೆಯುತ್ತಿರುವ ನಮ್ಮ ಕಾಲದ ಅನೇಕ ಕವಿಗಳಿಗೆ ಪಂಪನಲ್ಲಿ ಉತ್ತರಗಳಿವೆ.

ಆದರೆ, ನಮ್ಮ ಕಾಲದ ಸಮಸ್ಯೆ ಇರುವುದು ಪಂಪನಂತಹ ಕವಿಯನ್ನು ನಮ್ಮ ಕಾಲದಲ್ಲಿ ಹೇಗೆ ಸಂವಹನ ಮಾಡಬೇಕು ಎನ್ನುವುದರಲ್ಲಿ. 'ಪಂಪಭಾರತ ದೀಪಿಕೆ'ಯನ್ನು ಬರೆದ ಡಿ.ಎಲ್. ನರಸಿಂಹಾಚಾರ್ ಅವರಿಂದ ಹಿಡಿದು ಇತ್ತೀಚಿನ ಎಚ್.ಎಸ್. ವೆಂಕಟೇಶಮೂರ್ತಿಯವರ ಪ್ರಯತ್ನದವರೆಗೆ ಹಲವು ಮಾದರಿಗಳಿವೆ. ಇವರಲ್ಲಿ ಎಲ್. ಬಸವರಾಜು ಮತ್ತು ಅನಂತರಾಮಯ್ಯನವರೂ ಸೇರುತ್ತಾರೆ. ಆದರೆ, ಯಾರ ಪ್ರಯತ್ನವೂ ಯಶಸ್ವಿಯೆನಿಸುವುದಿಲ್ಲ. ಓದುಗರ ಹಿನ್ನೆಲೆ, ಪೂರ್ವಸಿದ್ಧತೆ ಮತ್ತು ನಿರೀಕ್ಷೆಗಳು ಬದಲಾದಂತೆ ಕೆಲವು ಬಗೆಯ ಕಾವ್ಯಗಳು ಜನಮಾನಸದಿಂದ ದೂರವಾಗುವುದು ಅನಿವಾರ್ಯವೇ? ಅಥವಾ ಪಂಪನಂಥವರ ಪಾಡು ಮೊದಲಿನಿಂದಲೂ ಹೀಗೆಯೇ ಇತ್ತೇ? ಎಂಟು ನೂರು ವರ್ಷಗಳ ಹಿಂದೆ ಬರೆದ ವಚನಕಾರರು ಈ ಬಿಕ್ಕಟ್ಟನ್ನು ಹೇಗೆ ಬಿಡಿಸಿಕೊಂಡರು? ಬಸವಣ್ಣನವರು ಕಾವ್ಯರಚನೆ ಮಾಡಿದ್ದರೆ ಹೇಗೆ ಬರೆಯುತ್ತಿದ್ದರು? ಬರೆದ ಕಾಲಕ್ಕೆ ಬಹಳ ಸೂಕ್ತವಾಗಿದ್ದ ಆಕೃತಿ–ಶೈಲಿ–ಪದಕೋಶಗಳೇ ಬೇರೊಂದು ಕಾಲದಲ್ಲಿ ತಡೆಗೋಡೆಗಳಾಗುತ್ತವೆಯೇ? ಉತ್ತರಗಳು ಸುಲಭವಲ್ಲ.

ನಮ್ಮ ಕಾಲದ ಸೃಜನಶೀಲ ಮನಸ್ಸುಗಳು, ಈಗ ಬರೆಯುತ್ತಿರುವ ಕವಿಗಳು–ಕಾದಂಬರಿಕಾರರು ಪಂಪನನ್ನು ಓದುವ, ಒಳಗೊಳ್ಳುವ, ಮತ್ತೆ ಕಟ್ಟುವ ಬಗೆಯಲ್ಲಿ ಮಾತ್ರವೇ ಅವನಲ್ಲಿ ಅಡಗಿರುವ ಆಧುನಿಕತೆಯ ನೆಲೆಗಳು ನಮ್ಮ ಕಾಲದ ಓದುಗರಿಗೆ ಪರಿಚಿತವಾಗಬಹುದು. ಏಕೆಂದರೆ, ಅದು ಸಹಜವಾಗಿಯೇ ಮರುಸೃಷ್ಟಿ ಮತ್ತು ವ್ಯಾಖ್ಯಾನಗಳ ದಾರಿ. ಬಿ.ಎಂ.ಶ್ರೀ., ಕುವೆಂಪು, ಪು.ತಿ.ನ., ಕಂಬಾರ ಮುಂತಾದವರು ಮಾಡಿದ್ದು ಈ ಕೆಲಸವನ್ನೇ. ನಮ್ಮ ಕಾಲದ ಶಿವಪ್ರಕಾಶ್, ವೆಂಕಟೇಶಮೂರ್ತಿ ಮತ್ತು ಕೆ.ವೈ. ನಾರಾಯಣಸ್ವಾಮಿಯವರು ಕೂಡ ಕೆಲಸ ಮಾಡಿದ್ದಾರೆ. ಆದರೆ, ಈ ಕವಿಗಳಿಗಾದರೂ ಪಂಪನನ್ನು ತನ್ನ ಸಮಸ್ತ ಶಕ್ತಿಯೊಂದಿಗೆ ತಲುಪಿಸುವ ಕೆಲಸವನ್ನು ನಾವು ಮೊದಲು ಮಾಡಬೇಕಾಗಿದೆ.

**ಎಚ್.ಎಸ್. ರಾಘವೇಂದ್ರ ರಾವ್**

ವಿಮರ್ಶಕ, ಅನುವಾದಕ ರಾಘವೇಂದ್ರ ರಾವ್ ಪ್ರಾಧ್ಯಾಪಕರಾಗಿ ನಿವೃತ್ತರು. 'ವಿಶ್ಲೇಷಣೆ', 'ನಿಲುವು', 'ಹಾಡೆ ಹಾದಿಯ ತೋರಿತು', 'ತರು ತಳೆದ ಪುಷ್ಟ', 'ಚಕ್ರವರ್ತಿಯ ಬಟ್ಟೆಗಳು', 'ಬಾಲ ಮೇಧಾವಿ', 'ಶಿಕ್ಷಣ ಮತ್ತು ಜೀವನ', 'ಇರುವೆಗಳು ಮತ್ತು ಇತರ ಕಥೆಗಳು', 'ಸಂಸ್ಕೃತಿ ಸಂಗತಿ', 'ಕಪ್ಪು ಕವಿತೆ', 'ಮಂಜು ಮಣ್ಣು ಮೌನ', 'ಮಂಜಿನ ಶಿವಾಲಯಕ್ಕೆ', 'ಪ್ಲೇಗ್' ಅವರ ಕೆಲವು ಪ್ರಕಟಿತ ಪುಸ್ತಕಗಳು.